ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) | ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ<br>ಇವರ ನ್ಯಾಯಾಲಯದಲ್ಲಿ.<br>ಸಿ.ಸಿ. ನಂ.ಃ 54/2020 |
|---|---|

.....................................................................

CW 05
PW 04

| | | |
|---|---|---|
| ಹೆಸರು | ಃ | ಸಿದ್ದಪ್ಪ ಕಾಂಬಳೆ |
| ತಂದೆಯ ಹೆಸರು | ಃ | ಕಾಳಪ್ಪ |
| ವಯಸ್ಸು | ಃ | 58 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸಸ್ಥಳ | ಃ | ಮೌಳಂಗಿ, ತಾಃಜೋಯಿಡಾ. |

ದಿನಾಂಕ 11-06-2024 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ಸಾಕ್ಷಿಗೆ ನಿಪಿ 7 ಅನ್ನು ತೋರಿಸಿ ಸಹಿ ಗುರುತಿಸಲು ಸೂಚಿಸಿದ್ದು ಸಾಕ್ಷಿ ಸದರಿ ದಾಖಲೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 7 ಬಿ ಎಂದು ಗುರುತಿಸಲಾಯಿತು.

ನಿಪಿ 7 ಕ್ಕೆ ಪೊಲೀಸರ ಕೋರಿಕೆಯಂತೆ ಸಹಿ ಮಾಡಿದ್ದು, ಅದರಲ್ಲಿ ಬರೆದ ವಿಷಯಗಳು ಗೊತ್ತಿಲ್ಲ,ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.

ದಿನಾಂಕ 31-01-2020 ರಂದು ತನಿಖಾಧಿಕಾರಿ ಬೆಳಗ್ಗೆ 09-00 ರಿಂದ 09-45 ರ ವರೆಗೆ ನಿಪಿ 7 ರಂತೆ ನನ್ನ ಮತ್ತು ಚಾಸ 6 ರವರ ಸಮಕ್ಷಮ ಕೆಎ-30-ಎಲ್-0583 ರ ವಾಹನ ಪರಿಶೀಲನಾ ಪಂಚನಾಮೆ ಮಾಡಿ, ನಿಪಿ 7 ಕ್ಕೆ ನನ್ನ ಸಹಿ ಪಡೆದರು ಎಂದರೆ ಸರಿ. ಎಲ್ಲ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು** : ಆರೋಪಿ ಪರ ಶ್ರೀ ಎಮ್ ಸಿ ಎಚ್ ವಕೀಲರು ಏನೂ ಇಲ್ಲ ಎನ್ನುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.